सत्यमेव जयते


ರಾಜೀವ್ ಚಂದ್ರಶೇಖರ್

ಸಂಸತ್ ಸದಸ್ಯರು


5ನೇ ಫೆಬ್ರವರಿ, 2010

ಮಾನ್ಯಶ್ರೀ ಯಡಿಯೂರಪ್ಪರವರೇ,

ವಿಷಯ: ಅಧಿಸೂಚನೆಗಳು / ಅಧಿಸೂಚನೆಗಳ ಹಿಂಪಡೆತ (Notification / De-notification).

ಇದು ಬೆಂಗಳೂರಿನಲ್ಲಿರು ಆಸ್ತಿಗಳ ವಿಷಯದಲ್ಲಿ ನಗರಾಭಿವೃದ್ಧಿ ಇಲಾಖೆ ಅಧಿಸೂಚನೆ ಹಿಂಡೆಯುವ (ಡಿನೋಟಿಫಿಕೇಷನ್) ಕುರಿತಾಗಿದೆ. ಈ ಪ್ರಕ್ರಿಯೆ ಬರಬರುತ್ತಾ ಇರಬೇಕಾದ ಪಾರದರ್ಶಕತೆಯನ್ನು ಕಳೆದುಕೊಳ್ಳುತ್ತಿದೆ.

ಬಹಳಷ್ಟು ಸಂದರ್ಭಗಳಲ್ಲಿ ಈ ಹಿಂಪಡೆದ ಅಧಿಸೂಚನೆ ಬಿ.ಡಿ.ಎ ಅಥವಾ ಅಂತಹ ಪ್ರಾಧಿಕಾರ ಅಧಿಸೂಚಿಸಿರುವ ಅಥವಾ ಈಗಾಗಲೇ ವಶಪಡಿಸಿಕೊಂಡಿರುವ ಆಸ್ತಿಗಳ ಬಗ್ಗೆಯೇ ಆಗಿರುತ್ತದೆ. ಹೀಗೆ ಅಧಿಸೂಚನೆ ಹಿಂಪಡೆಯುವಲ್ಲಿ ಯಾವುದೋ ಆಸ್ತಿಯ ಮಾಲೀಕರನ್ನು ಅನುಗ್ರಹಿಸುತ್ತಿರುವಂತೆ ತೋರುತ್ತದೆ. ಸರ್ಕಾರಿ ಅಥವಾ ಸಾಂಸ್ಥಿಕ ಪ್ರಯತ್ನದಿಂದ ಸುತ್ತಮುತ್ತಲಿನ ಬಡಾವಣೆಗಳು ಅಭಿವೃದ್ಧಿಪಡಿಸಲಾಗಿದ್ದು, ಅದರ ಪ್ರಭಾವದಿಂದ ಈ ಆಸ್ತಿಗಳ ಬೆಲೆ ಹೆಚ್ಚಾಗಿರುವುದೇ ಇಂಥಾ ಅಧಿಸೂಚನೆ ಹಿಂಪಡೆಯುವ ಸನ್ನಾಹಕ್ಕೆ ಕಾರಣ.

ಆದ್ದರಿಂದ, ಅಧಿಸೂಚನೆಯನ್ನು ತಾತ್ಪೂರ್ತಿಕವಾಗಿ (ಅಡ್‌ಹಾಕ್) ಹಿಂಡೆಯುವುದನ್ನು ಸಂಪೂರ್ಣವಾಗಿ ನಿಲ್ಲಿಸಬೇಕಾದದ್ದು ನ್ಯಾಯ, ಅದಕ್ಕೆ ನಾನು ಒತ್ತಾಯಿಸುತ್ತೇನೆ. ಅಧಿಸೂಚನೆ ಹಿಂಪಡೆಯುವುದನ್ನು ನಿರ್ದಿಷ್ಟ ಆಧಾರದ ಮೇಲೆ ಕೆಲವೇ ಸಂದರ್ಭಗಳಿಗೆ ಮಿತಗೊಳಿಸಿಕೊಳ್ಳುವುದು ಸೂಕ್ತ. ಉದಾರಹಣೆಗೆ: ಶಾಲೆ, ಕಾಲೇಜು, ಆಸ್ಪತ್ರೆ, ಸಮುದಾಯ ಭವನ ಮತ್ತು ಅಂತಹಾ ನಿರ್ಧಿಷ್ಟ ಉದ್ದೇಶಕ್ಕೆ ಮಾತ್ರ ಆಸ್ತಿಗಳ ಅಧಿಸೂಚನೆಯನ್ನು ಹಿಂಪಡೆಯುವಂತಿರಬೇಕು.

ಇಂತಹ ಪ್ರಕ್ರಿಯೆ ಮತ್ತು ಯೋಗ್ಯ ಮಾನದಂಡಗಳ ಬಳಕೆ ಆಡಳಿತದ ಪಾರದರ್ಶಕತೆಯನ್ನು ಹೆಚ್ಚಿಸುತ್ತದೆ ಮತ್ತು ಲಂಚಗುಳಿಗಳ ಭ್ರಷ್ಟತೆಗೆ ಕಡಿವಾಣ ಹಾಕುತ್ತದೆ.

ಈ ವಿಷಯದಲ್ಲಿ ತಮ್ಮ ದೃಢೀಕರಣ ಮತ್ತು ಸೂಕ್ತ ಪ್ರತಿಕ್ರಿಯೆಯನ್ನು ಎದುರುನೋಡುತ್ತಿದ್ದೇನೆ.

ತಮ್ಮ ವಿಶ್ವಾಸಿ,

o/c

ರಾಜೀವ್ ಚಂದ್ರಶೇಖರ್

ಮುಖ್ಯಮಂತ್ರಿಯವರ ಸಚಿವಾಲಯ
ಸ್ವೀಕೃತಿ ಸಂಖ್ಯೆ: ........... ದಿನಾಂಕ: 6/2/10

ಶ್ರೀ ಬಿ.ಎಸ್.ಯಡಿಯೂರಪ್ಪ ರವರು
ಸನ್ಮಾನ್ಯ ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ, ಬೆಂಗಳೂರು


11ನೇ ಮಹಡಿ, ದೊಡ್ಡ ಗೋಪುರ, ಸರ್.ಎಂ.ವಿಶ್ವೇಶ್ವರಯ್ಯ ಕೇಂದ್ರ, ಡಾ.ಅಂಬೇಡ್ಕರ್ ವೀಧಿ, ಬೆಂಗಳೂರು - 560 001.
ದೂರವಾಣಿ : 91-80-22863600, ದೂರವಾಣಿ / ಫ್ಯಾಕ್ಸ್ : 91-80-22863680
ಅಂತರ್ಜಾಲ ವಿಳಾಸ : rajeev.c@nic.in